† ಶ್ರೀ ಬಿ. ಎಂ. ಪಾಟೀಲ್.—ನನಗೆ ಗೊತ್ತಿರುವ ಮಟ್ಟಿಗೆ ಈ ಸಂಸ್ಥೆಗಳಿಗೆ ರಿಯಾಯಿತಿ ಕೊಡುವುದಕ್ಕೆ ಆಕ್ಷೇನಲ್ಲ ಅವಕಾಶವಿದ್ದ ಹಾಗೆ ಕಾಣುವುದಿಲ್ಲ. ಮಾನ್ಯನದನ್ಯರು ಹೇಳಿದ್ದನ್ನು ಸರ್ಕಾರ ಪರಿಶೀಲನೆ ಮಾಡಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಅನೇಕ ವರ್ಷಗಳಿಂದ ಗ್ರಾಂಟ್ ಪಡೆಯತಕ್ಕ ವಿದ್ಯಾಸಂಸ್ಥೆಗಳಿಗೆ ಈ ಕಂದಾಯದ ರಿಯಾಯಿತಿಯನ್ನು ಕೊಡಲಾಗುತ್ತಿದೆ. ಆದರೆ ಗ್ರಾಂಟ್ ದೊರೆಯದೆ ಇರತಕ್ಕ ಅನೇಕ ಆಂಗ್ಲೋ ಇಂಡಿಯನ್ ಇನ್‌ಸ್ಟಿಟ್ಯೂಟ್‌ನವರು ಈ ವಿಚಾರದಲ್ಲಿ ಬಹಳ ಕಾತುರರಾಗಿದ್ದಾರೆ. ಅವರಿಗೂ ಈ ಅನುಕೂಲವನ್ನು ಒದಗಿಸುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಸಹಾಯ ಧನ ಪಡೆಯದೆ ಯಾವ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುತ್ತದೆಯೋ ಅಂಥ ಸಂಸ್ಥೆಗಳಿಗೆ ರಿಯಾಯಿತಿ ಕೊಡಬೇಕೆಂಬ ಉದ್ದೇಶ ಸರ್ಕಾರದವರಿಗಿಲ್ಲ.

Construction of Buildings of Fisheries College near Mangalore

336. **Sri B. M. IDINABBA** (Mangalore).—

Will the Minister of State for Fisheries and Ports be pleased to state:—

(*a*) when the buildings of the Fisheries College that would be inaugurated near Mangalore, South Kanara District will be completed and start functioning ;

(*b*) the total expenditure that will be incurred by the time all the buildings of the said college is completed and start functioning ;

(*c*) the number of students together with their qualifications who would come for studies every year in that college ?

Sri H. C. LINGA REDDY (Minister of State for Fisheries and Ports).—

(*a*) It is not possible to say exactly now.

(*b*) The total cost will be about Rs. 77.82 lakhs.

(*c*) the experts Committee has suggested to admit 20 students in the beginning and to raise this number gradually to 40.

The minimum qualification prescribed for the candidates is a pass in P. U. C. Examination getting at least 45 per cent of marks in Science Subject. The Agricultural University has to take decision in this behalf.

ಶ್ರೀ ಬಿ. ಎಂ. ಇದಿನಬ್ಬ.—ಪೊನುಗಾರಿಕೆ ಕಾಲೇಜನ್ನು ವಾಸ್ತವವಾಗಿ ಯಾವ ಜಾಗದಲ್ಲಿ ಶಂಖುಸ್ಥಾಪನೆ ಮಾಡಲಾಗಿದೆ ? ಆ ಸ್ಥಳದ ಹೇಸರೇನು, ಯಾರು ಅದರ ಶಂಖುಸ್ಥಾಪನೆ ಮಾಡಿದವರು ?

† ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಶಂಖುಸ್ಥಾಪನೆಮಾಡಲಿಲ್ಲ. ಸಾಂಕೇತಿಕವಾಗಿ ಅವನ್ನು ಓಪನ್ ಮಾಡಲಾಗಿದೆ ಎಂದು ಡಿಕ್ಲೇರ್ ಮಾಡಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಅದು ಆಗತಕ್ಕ ಸ್ಥಳವೆಲ್ಲಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಉಳ್ಳಾಳ್ ಎಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ.

† Indicates that the speeches or remarks have not been revised by the member concerned.